



# ಮರದ ಪುರಾತನ ಸೇತುವೆ

ಇಂದಿನ ಅತ್ಯಾಧುನಿಕ ಯುಗದಲ್ಲೂ ಜಪಾನಿನಲ್ಲಿ ಅತ್ಯಧಿಕ ಉದ್ದದ ಮರದ ಸೇತುವೆಯೊಂದು ಅಸ್ತಿತ್ವ ಉಳಿಸಿಕೊಂಡಿದೆ. ಜಗತ್ತಿನ ಅತೀ ಹಳೆಯ ಮರದ ಸೇತುವೆ ಇದು ಎಂದು ಗಿನ್ನೆಸ್ ದಾಖಲೆಯನ್ನೂ ಗಳಿಸಿದೆ.

ಶಿಮಾ ಪ್ರಾಂತ್ಯದ ಶಿಜುವೋಕಾದಲ್ಲಿ ಹರಿಯುವ ಈ ನದಿ 'ಮಾಕಿನೋಹರ' ಮಹಾನದಿ ಎನಿಸಿಕೊಂಡಿದೆ. 1879ರಲ್ಲಿ ಈ ನದಿಗೆ ಪೂರ್ಣವಾಗಿ ಮರದಿಂದಲೇ ಸೇತುವೆ ಕಟ್ಟಲಾಯಿತು.

897 ಮೀಟರ್ ಉದ್ದದ ಈ ಸೇತುವೆಯ ಕಂಬಗಳು ಪ್ರತೀ ವರ್ಷ ನೆರೆಗೆ ಕೊಚ್ಚಿಕೊಂಡು ಹೋಗುತ್ತಿದ್ದ ಕಾರಣ 1965ರಲ್ಲಿ ಕಾಂಕ್ರೀಟ್ ಕಂಬಗಳಾಗಿ ಪರಿವರ್ತನೆಯಾಯಿತು ಎಂಬುದನ್ನು ಬಿಟ್ಟರೆ ಸೇತುವೆಯ ಮೇಲ್ಭಾಗದಲ್ಲಿರುವ ಹಲಗೆಗಳು, ಕಂಬಗಳು, ಕಟಾಂಜನಗಳು ಎಲ್ಲವೂ ಮರದಿಂದಲೇ ನಿರ್ಮಾಣವಾಗಿ ಹಿಂದಿನದೇ ಉಳಿದುಕೊಂಡಿವೆ. ಇದೆಲ್ಲದಕ್ಕೆ 135 ವರ್ಷಗಳು ದಾಟಿದ್ದರೂ ಸೇತುವೆ ಸದೃಢವಾಗಿವೆ.

ಸೇತುವೆಯನ್ನು ದಾಟಲು ಹಿರಿಯರು 100 ಯೆನ್, ಮಕ್ಕಳು 10 ಯೆನ್ ಸುಂಕ ತೆರಬೇಕು. ಸೇತುವೆಯ ಇಕ್ಕೆಲಗಳಲ್ಲಿ ರೆಸ್ಟೋರೆಂಟ್‌ಗಳು, ಸ್ನಾನಗೃಹಗಳು, ಅಂಗಡಿಗಳು, ತೂಗಾಡುವ ಭಾರೀ ಗಂಟೆ, ವಾಹನ ತಂಗುದಾಣಗಳು ಇವೆ. ನಗುವ ಬುದ್ಧನೂ ಸೇರಿದಂತೆ ವಿವಿಧ ಬಗೆಯ ಶಿಲಾ ಪ್ರತಿಮೆಗಳು ಮಕ್ಕಳಿಗೂ ಹಿರಿಯರಿಗೂ ಮನರಂಜನೆ ಕೊಡುತ್ತವೆ. ಸೇತುವೆಯಲ್ಲಿ ಕಸ ಹಾಕದೆ ಶುಚಿಯಾಗಿಟ್ಟಿರುವ ಜಪಾನೀಯರು ಅದನ್ನು ಸ್ವಲ್ಪವೂ ಕೆಡಿಸದೆ ಅಭಿಮಾನದಿಂದ ರಕ್ಷಿಸಿಕೊಂಡಿದ್ದಾರೆ.

■ ಪ.ರಾಮಕೃಷ್ಣ ಶಾಸ್ತ್ರಿ

